ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನಲ್ಲಿ ಅಕ್ರಮ ಗಣಿ ಸಾಗಾಣಿಕೆ

839 (1072) ಶ್ರೀ ಜಿ.ವಿ. ಸಿದ್ದಪ್ಪ (ಅರಸೀಕೆರೆ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆ (ಹಿಂದಿನ ಮೈಸೂರು ಜಿಲ್ಲೆ) ಯಳಂದೂರು ತಾಲ್ಲೂಕಿನಾದ್ಯಂತ ಕರೀಕಲ್ಲಿನ ಅಕ್ರಮ ಮತ್ತು ಅನಧಿಕೃತ ಗಣಿಗಾರಿಕೆ ಹಾಗೂ ಸಾಗಾಣಿಕೆ ನಡದಿದೆಯೇ;

ಆ) ನಡೆದಿದ್ದಲ್ಲಿ, ಯಾವ ಯಾವ ಗ್ರಾಮದ ಯಾವ ಯಾವ ನರ್ವೆ ನಂಬರ್‌ಗಳಲ್ಲಿ ಎಷ್ಟೆಷ್ಟು ನಡೆದಿದೆ ಹಾಗೂ ಅವುಗಳ ವಿಸ್ತೀರ್ಣವೆಷ್ಟು;

ಇ) ಈ ರೀತಿ ಅಕ್ರಮ ಮತ್ತು ಅನಧಿಕೃತ ಗಣಿಗಾರಿಕೆ ಮಾಡುತ್ತಿರುವ ವ್ಯಕ್ತಿಗಳು ಯಾರು ಯಾರು?

ಈ) ಅಕ್ರಮ ಮತ್ತು ಅನಧಿಕೃತ ಕರೀಕಲ್ಲು ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡಿ ಮಾರಾಟ ಮಾಡಿ ಮಾರಾಟ ಮಾಡಿದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಇಂತಹ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಕರಾವಳಿಯ ಹತ್ತು ಪಟ್ಟಣಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವುದು

840 (835) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕರಾವಳಿ ಪ್ರದೇಶದ ಮೂರು ಜಿಲ್ಲೆಗಳ ವ್ಯಾಪ್ತಿಯ ಎಷ್ಟು ಪಟ್ಟಣಗಳಿಗೆ ಮೂಲಭೂತ ಸೌಲಭ್ಯವನ್ನು ಒದಗಿಸಲಾಗಿದೆ;

ಆ) ಇದಕ್ಕೆ ಯಾವ ಬ್ಯಾಂಕ್‌ನಿಂದ ಎಷ್ಟು ಕೋಟಿ ನೆರವು ಪಡೆಯಲಿದೆ;

ಇ) ಈ ಸಾಲಕ್ಕೆ ಬಡ್ಡಿ ಎಷ್ಟು, ಮರುಪಾವತಿಗೆ ಕಾಲಮಿತಿ ಹಾಕಲಾಗಿದೆಯೇ;

ಈ) ಈ ಯೋಜನೆಯ ಅನುಷ್ಠಾನ ವ್ಯಾಪ್ತಿಯಲ್ಲಿ ಬರುವ ಪಟ್ಟಣಗಳಾವುವು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಹತ್ತು ಪಟ್ಟಣಗಳು

ಆ) ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಯೋಜನೆಯ ಒಟ್ಟು ಅಂದಾಜು 1056 ಕೋಟಿ ರೂ.ಗಳು (251.4 ಮಿಲಿಯನ್ ಯು.ಎಸ್. ಡಾಲರ್) ಇದರಲ್ಲಿ ಸುಮಾರು ರೂ 730 ಕೋಟಿಗಳು (175 ಮಿಲಿಯನ್ ಯು.ಎಸ್.ಡಾಲರ್) ಪಡೆಯಲಾಗಿದೆ.

ಇ) ಶೇಕಡ 13.50 ರಷ್ಟು ಬಡ್ಡಿ, ಸಾಲದ ಮರುಪಾವತಿ 2005 ರಿಂದ ಪ್ರಾರಂಭಿಸಲಾಗುವುದು.

ಈ) ಮಂಗಳೂರು, ಪುತ್ತೂರು, ಉಲ್ಲಾಳ, ಕುಂದಾಪುರ, ಉಡುಪಿ, ಕಾರವಾರ, ಸಿರಸಿ, ದಾಂಡೇಲಿ ಭಟ್ಕಳ ಮತ್ತು ಅಂಕೋಲ.

ವಿದ್ಯಾರ್ಥಿನಿಲಯ ಮೇಲ್ವಿಚಾರಕರ ನೇಮಕಾತಿ

841(839) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಾಲಿ ಇರುವ ವಿದ್ಯಾರ್ಥಿನಿಲಯ ಮೇಲ್ವಿಚಾರಕ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆಯೇ;

ಆ) ಆಹ್ವಾನಿಸಿದ್ದಲ್ಲಿ, ಎಷ್ಟನೇ ಬಾರಿ ಆಹ್ವಾನಿಸಲಾಗಿದೆ; ಈ ರೀತಿ 2-3 ಸಾರಿ ಆಹ್ವಾನಿಸಲು ಕಾರಣಗಳೇನು;

ಇ) ಈಗಾಗಲೇ ಕರೆದಿದ್ದ ಅರ್ಜಿಗಳನುಸಾರ ಸಂದರ್ಶನ ನಡೆಸಲಾಗಿದೆಯೇ; ನಡೆಸದಿದ್ದಲ್ಲಿ ಸಂದರ್ಶನ ಪ್ರಕ್ರಿಯೆ ಯಾವ ಹಂತದಲ್ಲಿದೆ.

ಈ) ಈ ನೇಮಕಾತಿ ಆಹ್ವಾನುಸಾರ ಎಷ್ಟು ಅರ್ಜಿಗಳು (ಅಭ್ಯರ್ಥಿಗಳು) ಬಂದಿದ್ದವು?

ಉ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) ಮೂರು ಬಾರಿ, ಸರ್ಕಾರದಿಂದ ಕ್ರಿಮಿಲೇಯರ್ ಪದ್ಧತಿ, ಗ್ರಾಮೀಣ ಕೃಪಾಂಕ ಮತ್ತು ನೇರ ನೇಮಕಾತಿ ನಿರ್ಬಂಧ ಮುಂತಾದ ನೀತಿಗಳನ್ನು ಬೇರೆ ಬೇರೆ ಸಮಯಕ್ಕೆ ಜಾರಿ ಮಾಡಿದ ಕಾರಣ ಮೂರು ಬಾರಿ ಅರ್ಜಿಗಳನ್ನು ಪಡೆಯಬೇಕಾಯಿತು.

ಇ) ಇಲ್ಲ; ಸರ್ಕಾರಿ ಆದೇಶ ಸಂಖ್ಯೆ : ಡಿಪಿಎಆರ್ 103 ಸೇವೆನಿ 2000, ದಿನಾಂಕ 17-02-2001ರಲ್ಲಿ ನೀಡಲಾದ ಮಾರ್ಗಸೂಚಿಗಳನ್ವಯ ತೆರವಿರುವ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುತ್ತಿದೆ.

ಈ) 52,750

ಉ) 423